**ದಿನಾಂಕ 16.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ವಿ.ಬಿ. ವಕೀಲರಿಂದ

**11.** ನಮ್ಮ ಮನೆಯನ್ನು ಪರ್ಣ ಕುಟೀರ ಎಂದು ಕರೆಯುತ್ತಾರೆ. ಆ ರೀತಿ ಕರೆಯಲು ಕಾರಣ ಏನೂ ಇರುವುದಿಲ್ಲ. ಪರ್ಣ ಕುಟೀರ ಎಂದು ಯಾವುದೇ ದಾಖಲೆಯಲ್ಲಿ ನಮೂದಾಗಿರುವುದಿಲ್ಲ. ದಾವಾ ಆಸ್ತಿಯಲ್ಲಿರುವ ಹಂಚಿನ ಮನೆಯನ್ನು ನಾನು ಕಟ್ಟಿಸಿರುತ್ತೇನೆ. ಹಂಚು ಯಾವ ಕಂಪನಿಯದ್ದು ಎಂದು ಗೊತ್ತಿಲ್ಲ. ಹಂಚನ್ನು ಕಲ್ಲಡ್ಕ ದಲ್ಲಿ ಖರೀದಿಸಿರುತ್ತೇನೆ. ಮನೆಯನ್ನು ಕಟ್ಟಿಸಲು ಪಂಚಾಯತಿಯಿಂದ ಪರವಾನಗಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಪರವಾನಗಿ ಪ್ರಸ್ತುತ ನನ್ನ ಬಳಿ ಇಲ್ಲ. **1981** ರಲ್ಲಿ ಸದರಿ ಮನೆಯನ್ನು ಕಟ್ಟಿಸಿರುತ್ತೇನೆ. ನನ್ನ ಹೆಂಡತಿಯ ತಂದೆ ರಾಮ್ ಭಟ್ ರವರ ಮೂಲಕ ಮನೆ ಕಟ್ಟಿಸಿರುತ್ತೇನೆ. ಮಯ್ಯ ಯಾರೆಂದು ನನಗೆ ಗೊತ್ತಿಲ್ಲ. ಅವಶ್ಯಕತೆ ಬಿದ್ದಾಗ ಮತ್ತು ಹಣಕಾಸು ಸ್ಥಿತಿಯಲ್ಲಿದ್ದಾಗ ಸಾರ್ನೆ ರಿಪೇರಿ ಮಾಡಿಸಿರುತ್ತೇನೆ. ರಿಪೇರಿ ಮಾಡಿಸಿ ಕುರಿತು ದಾಖಲೆ ಇರುವುದಿಲ್ಲ. ಎಮ್ . ಟಿ . ಭಟ್, ಪುತ್ತೂರು ಎಂದರೆ ನನ್ನ ತಾಯಿಯ ಅಣ್ಣ ಅಂದರೆ ನನಗೆ ಸೋದರ ಮಾವ. ಅವರು ನನ್ನ ಆತ್ಮೀಯರು, ದ್ವೇಷ ಇರುವುದಿಲ್ಲ. ಮೇಲೆ ಹೇಳಿದ ಸದರಿ ಮನೆಯನ್ನು ಮತ್ತು ಅದರ ರಿಪೇರಿಯನ್ನು ಸಮಷ್ಟಿ ಅದಾಯದಿಂದ ಕಟ್ಟಲಾಗಿದೆ ಎಂದರೆ ಸರಿಯಲ್ಲ.

**12.** ದಾವಾದಲ್ಲಿರುವ ಮರಗಳಿಗೆ ಹನಿ ನೀರಾವರಿ ವ್ಯವಸ್ಥೆ ಮಾಡಿರುವುದಿಲ್ಲ. ಅಲ್ಲಿರುವ ಮರಗಳಿಗೆ ಸಮಷ್ಟಿ ಆದಾಯದಿಂದ ಹನಿ ನೀರಾವರಿ ವ್ಯವಸ್ಥೆ ಮಾಡಲಾಗಿದೆ ಎಂದರೆ ಸರಿಯಲ್ಲ. ಕಟ್ಟಡ ವಿನ್ಯಾಸಗಾರರಾದ ಕೇಶವ ಭಟ್ ಹಾಗೂ ಹನಿ ನೀರಾವರಿ ವ್ಯವಸ್ಥೆ ನಡೆಸುವ ಮಹಾದೇವ ಶಾಸ್ತ್ರಿ ಯಾರೆಂದು ನನಗೆ ಗೊತ್ತಿಲ್ಲ. ಸದರಿ ರವರು ಮನೆಯನ್ನು ರಿಪೇರಿ ಮಾಡಿರುತ್ತಾರೆ ಮತ್ತು ಹನಿ ನೀರಾವರಿ ವ್ಯವಸ್ಥೆ ಕೆಲಸ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ.

**13. 1998** ರಿಂದ ನಾನು ಕಲ್ಲಡ್ಕದ ಮಧುರಾ ಎಂಬ ಮನೆಯಲ್ಲಿ ವಾಸವಾಗಿರುತ್ತೇನೆ. ಸದರಿ ಮನೆಯನ್ನು ನಾನು ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ಹೆಂಡತಿಯ ತಂದೆಯಾದ ರಾಮ್ ಭಟ್ ರವರು ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯರು ಸದರಿ ಮನೆಯಲ್ಲಿ ಪಾಲು ಕೋರಿರುವುದಿಲ್ಲ. ಕೃಷ್ಣ ಭಟ್ ರವರಿಗೆ ಮೈಸೂರು, ಮುಲ್ಕಿ ಕಡೆಯಲ್ಲಿ ಜಾಗ ಇದ್ದು ಮುಲ್ಕಿ ಯಲ್ಲಿ **10** ಸೆಂಟ್ಸ್ ಜಾಗವನ್ನು ಮಾರಿರುತ್ತಾರೆ. ನಾಲ್ಕನೆಯ ವಾದಿ ನಾರಾಯಣ ಭಟ್ ರವರಿಗೆ ಮೈಸೂರಿನಲ್ಲಿ ಜಾಗ ಇದೆ, ಅವರಿಗೆ ಹೇಗೆ ಬಂದಿದೆ ಎಂದು ಗೊತ್ತಿಲ್ಲ. ಮೈಸೂರು ನಜರಾಬಾದ್ ನಲ್ಲಿ ಸೈಟ್ ಖರೀದಿಸುವಾಗ ಹಣಕಾಸು ಸಹಾಯ ಮಾಡಿರುತ್ತೇನೆ, ಅದನ್ನು ಹಿಂದಿರುಗಿಸಿರುತ್ತಾರೆ. ವಾದಿಯರಿಗೆ ನಾನು ಯಾವುದೇ ಹಣಕಾಸು ಸಹಾಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**14.** ನಿಡಿ-**1** ಪ್ರತ್ಯುತ್ತರಕ್ಕೆ ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಪಾಟೀ ಸವಾಲಿನಲ್ಲಿ ನಾನು ಉಲ್ಲೇಖಿಸಿರುವ ಮೌಖಿಕ ಕರಾರಿನ ಕುರಿತು ನೋಟೀಸಿನಲ್ಲಾಗಲೀ , ತಕರಾರಿನಲ್ಲಾಗಲೀ ತಿಳಿಸಿರುವುದಿಲ್ಲ. ದುರ್ಲಾಭ ಪಡೆಯುವ ಉದ್ದೇಶದಿಂದ ಪ್ರಥಮ ಬಾರಿಗೆ ಪಾಟೀ ಸವಾಲಿನಲ್ಲಿ ಸದರಿ ಕರಾರನ್ನು ಉಲ್ಲೇಖಿಸಿರುತ್ತೇನೆ ಎಂದರೆ ಸರಿಯಲ್ಲ. ರಿಜಿಸ್ಟರ್ ಆಗುವ ಒಂದು ವಾರದ ಮೊದಲು ಮೌಖಿಕ ಕರಾರು ಆಗಿರುತ್ತದೆ. ಮೌಖಿಕ ಕರಾರು ಆಗುವಾಗ ನಾನು ಹಣ ಸಂದಾಯ ಮಾಡಿರುವುದಿಲ್ಲ. ದಾವಾ ಆಸ್ತಿಯು ಕುಟುಂಬದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಒಂದನೇ ಪ್ರತಿವಾದಿ, ನನ್ನ ತಂದೆ, ತಾಯಿ ಕಾಸರಗೋಡು ನಲ್ಲಿ ವಾಸವಾಗಿದ್ದ ಕಾರಣ ಹಾಗೂ ಒಂದನೇ ವಾದಿ ಕೊಚ್ಚಿನ್ ನಲ್ಲಿದ್ದ ಕಾರಣ ಕ್ರಯ ಪತ್ರ ನನ್ನ ಹೆಸರಿಗೆ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಕ್ರಯ ಆದ ನಂತರ ಸೊತ್ತಿನಲ್ಲಿ ಮೂರನೇ ವಾದಿಯು ಕೃಷಿ ಕೃತಾವಳಿಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮೂರು ಹಾಗೂ

ನಾಲ್ಕನೆಯ ವಾದಿಯರು ನೇರಳ ಕಟ್ಟೆ ಯಲ್ಲಿ ಶಾಲೆಗೆ ಹೋಗುತ್ತಿದ್ದರು ಮತ್ತು ಅವರಿಗೆ ನೇರಳ ಕಟ್ಟೆಯಲ್ಲಿ ಪಡಿತರ ಚೀಟಿ ಇರುತ್ತದೆ ಎಂದರೆ ಸರಿಯಲ್ಲ. ಸಮಷ್ಟಿ ಆದಾಯದಿಂದ ಖರೀದಿ ಮಾಡಿದ ಆಸ್ತಿಯನ್ನು ನನ್ನ ಸ್ವಂತ ಆಸ್ತಿ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ದಾವೆಯಲ್ಲಿ ತಿಳಿಸಿರುವಂತೆ ವ್ಯಾಜ್ಯ ಸೊತ್ತು ವಿಭಾಗ ಯೋಗ್ಯ ಸೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಸುಳ್ಳು ಪ್ರತಿವಾದ ಪತ್ರ ಮತ್ತು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**15.** ನಾನು ಹಾಜರುಪಡಿಸಿದ ಕೈ ಬರಹದ ಪಹಣಿಗಳನ್ನು ಪ್ರಕರಣ ದಾಖಲಿಸಿದ ನಂತರ ಪಡೆದುಕೊಂಡಿರುತ್ತೇನೆ. ತೆರಿಗೆ ರಸೀದಿಗಳನ್ನು **2010** ರ ನಂತರ ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಗಳು ನೇರಳಕಟ್ಟೆಯ ಕಪಾಟಿನಲ್ಲಿ ಇದ್ದವು. ನಾನು ಹೇಳಿದ ಹಾಗೆ ಯಾವುದೇ ದಾಖಲೆಗಳು ಕಾಣೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಇದೆ.**

**ಪ್ರಧಾನ ಸಿವಿಲ್‌ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ ಬಂಟ್ವಾಳ, ದ.ಕ.**

ಡಿ. ಡಬ್ಲ್ಯೂ-1 ಶ್ಯಾಮ ಭಟ್